# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 426 |
| ಸದಸ್ಯರ ಹೆಸರು | ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 30.01.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 05 ವರ್ಷಗಳಿಂದ ಇಲಾಖೆಯ ವತಿಯಿಂದ ಮೆಟ್ರಿಕ್-ನಂತರದ ಕೋರ್ಸ್ ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿ ವೇತನದ ಮೊತ್ತವೆಷ್ಟು; | ಕಳೆದ 05 ವರ್ಷಗಳಿಂದ ಹಿಂದುಳಿದ ಇಲಾಖೆ ವತಿಯಿಂದ ಮೆಟ್ರಿಕ್-ನಂತರದ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿ ವೇತನದ ಮೊತ್ತದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಇಲಾಖೆಯಲ್ಲಿ ಅನುದಾನದ ಕೊರತೆಯಿಂದ ಕಳೆದ 04 ವರ್ಷಗಳಿಂದ ಸುಮಾರು 263.59 ಕೋಟಿ ರೂ. ವಿದ್ಯಾರ್ಥಿ ವೇತನವನ್ನು ಬಾಕಿ ಉಳಿಸಿಕೊಂಡಿರುವುದು ನಿಜವೇ; | ಕಳೆದ 05 ವರ್ಷಗಳಲ್ಲಿ ಶುಲ್ಕ ಮರು ಪಾವತಿ ಕಾರ್ಯಕ್ರಮದಡಿ ಬಾಕಿ ಇರುವ ವಿದ್ಯಾರ್ಥಿಗಳಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಶುಲ್ಕ ಮರು ಪಾವತಿ ಮಾಡಲು ಕ್ರಮವಹಿಸಲಾಗಿದೆ. ಪ್ರಸ್ತುತ ಹಿಂದಿನ ಸಾಲುಗಳಲ್ಲಿ ಬಾಕಿ ಇದ್ದ 126202 ಅರ್ಹ ವಿದ್ಯಾರ್ಥಿಗಳಿಗೆ ರೂ.133.44 ಕೋಟಿಗಳ ಶುಲ್ಕ ಮರು ಪಾವತಿ ಮಾಡಲು ಕ್ರಮವಹಿಸಿದೆ.<br><br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳನ್ನು ಇ-ಆಡಳಿತ ಇಲಾಖೆಯು ಅಭಿವೃದ್ಧಿ ಪಡಿಸಿ ನಿರ್ವಹಣೆ ಮಾಡುತ್ತಿರುವ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಕಾರ್ಯಕ್ರಮಗಳಡಿ ವಿದ್ಯಾರ್ಥಿಗಳ ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದೆ.<br><br>ವಿದ್ಯಾರ್ಥಿಗಳ ಶೈಕ್ಷಣಿಕ ದತ್ತಾಂಶದಲ್ಲಿರುವ ಹೆಸರಿಗೂ ಹಾಗೂ ಆದಾರ್‌ನಲ್ಲಿರುವ ಹೆಸರಿಗೂ ವ್ಯತ್ಯಾಸವಿರುತ್ತದೆ, ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆದಾರ್ ಸಂಖ್ಯೆಯನ್ನು ಲಿಂಕ್ ಮಾಡಿರುವುದಿಲ್ಲ, ವಿಶ್ವವಿದ್ಯಾಲಯಗಳಿಂದ ಶೈಕ್ಷಣಿಕ ದತ್ತಾಂಶ ಹಂಚಿಕೊಂಡಿರುವುದಿಲ್ಲ ಮತ್ತು ಮಾನ್ಯ ಕರ್ನಾಟಕ ಹೈಕೋರ್ಟ್ ಆದೇಶದಂತೆ 2023-24 ಮತ್ತು 2024-25 ನೇ ಸಾಲುಗಳಿಗೆ ಆರ್ಥಿಕ ವರ್ಷ ಮುಕ್ತಾಯವಾದ ನಂತರವೂ ಅರ್ಜಿ ಸ್ವೀಕರಿಸಲಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ವಿದ್ಯಾರ್ಥಿ ವೇತನ ಪಾವತಿ ಮಾಡಲು ಬಾಕಿ ಇರುತ್ತದೆ. ಬಾಕಿ ಇರುವ |

...2

| | | |
|---|---|---|
| | | ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಜಿಲ್ಲಾ/ತಾಲ್ಲೂಕು ಮತ್ತು ವಿದ್ಯಾರ್ಥಿಗಳ ಲಾಗಿನ್‌ನಲ್ಲಿ ಅವಕಾಶ ನೀಡಲಾಗಿರುತ್ತದೆ. ಸದರಿ ಸಮಸ್ಯೆಗಳನ್ನು ಬಗೆಹರಿಸಿಕೊಂಡ ನಂತರ ಈ ವಿದ್ಯಾರ್ಥಿಗಳಿಗೆ ಪಾವತಿ ಮಾಡಲು ಕ್ರಮವಹಿಸಲಾಗುವುದು. |
| ಇ) | ಕಳೆದ 04 ವರ್ಷದಿಂದ ಇಲ್ಲಿಯವರೆಗೂ ವಿದ್ಯಾರ್ಥಿ ವೇತನಕ್ಕಾಗಿ ಬಂದಂತಹ ಅರ್ಜಿಗಳ ಸಂಖ್ಯೆ ಎಷ್ಟು; ಇದರಲ್ಲಿ ಅರ್ಹತೆವುಳ್ಳವರು ಹಾಗು ಅರ್ಹತೆ ಇಲ್ಲದವರ ಸಂಖ್ಯೆ ಎಷ್ಟು; ಹಾಗೂ ಅರ್ಹತೆವುಳ್ಳ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನ ನೀಡಲಾಗಿದೆಯೇ; | ಕಳೆದ 04 ವರ್ಷದಿಂದ ಇಲ್ಲಿಯವರೆಗೂ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನಕ್ಕಾಗಿ ಬಂದಂತಹ ಅರ್ಜಿಗಳ ಸಂಖ್ಯೆ, ಅರ್ಹ ಹಾಗೂ ಅನರ್ಹ ವಿದ್ಯಾರ್ಥಿಗಳ ಮಾಹಿತಿಯನ್ನು **ಅನುಬಂಧ**-2 ರಲ್ಲಿ ಒದಗಿಸಿದೆ.<br><br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳು ಅನುದಾನದ ಮಿತಿಗೆ ಒಳಪಟ್ಟಿದ್ದು ಆರ್ಥಿಕ ವರ್ಷದಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ ಅರ್ಜಿಸಲ್ಲಿಸಿದ ಅರ್ಹ ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಅನುದಾನದ ಲಭ್ಯತೆಯನುಸಾರ ವಿದ್ಯಾರ್ಥಿ ವೇತನ ಪಾವತಿಸಲು ಕ್ರಮವಹಿಸಲಾಗುತ್ತಿದೆ.<br><br>ಕಳೆದ 05 ವರ್ಷಗಳಲ್ಲಿ ವಿದ್ಯಾರ್ಥಿ ವೇತನ ಪಾವತಿಸಿರುವ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಈ) | ಮೆಟ್ರಿಕ್-ನಂತರದ ಕೋರ್ಸುಗಳ ವಿದ್ಯಾರ್ಥಿಗಳು ಯಾವ ಯಾವ ಯೋಜನೆಯಡಿಯಲ್ಲಿ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ? | ಮೆಟ್ರಿಕ್-ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಈ ಕೆಳಕಂಡ ವಿದ್ಯಾರ್ಥಿ ವೇತನ/ಸಹಾಯಧನ ಪಡೆಯಲು ಅರ್ಹರಿರುತ್ತಾರೆ<br>1. ಶುಲ್ಕ ಮರು ಪಾವತಿ/ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ .<br>2. ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ.<br>3. ಅಲೆಮಾರಿ/ಅರೆ-ಅಲೆಮಾರಿ ಜನಾಂಗದ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ. |

**ಸಂಖ್ಯೆ:ಹಿಂವಕ 117 ಬಿಎಂಎಸ್ 2026**

**(ಶಿವರಾಜ. ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 426 ಕ್ಕೆ ಅನುಬಂಧ-1

(ರೂ.ಕೋಟಿಗಳಲ್ಲಿ)

| ಯೋಜನೆಯ ಹೆಸರು | 2021-22 | | 2022-23 | | 2023-24 | | 2024-25 | | 2025-26 | |
|---|---|---|---|---|---|---|---|---|---|---|
| | ಪಾವತಿಯಾದ ಅರ್ಜಿಗಳ ಸಂಖ್ಯೆ | ಪಾವತಿಯಾದ ಮೊತ್ತ | ಪಾವತಿಯಾದ ಅರ್ಜಿಗಳ ಸಂಖ್ಯೆ | ಪಾವತಿಯಾದ ಮೊತ್ತ | ಪಾವತಿಯಾದ ಅರ್ಜಿಗಳ ಸಂಖ್ಯೆ | ಪಾವತಿಯಾದ ಮೊತ್ತ | ಪಾವತಿಯಾದ ಅರ್ಜಿಗಳ ಸಂಖ್ಯೆ | ಪಾವತಿಯಾದ ಮೊತ್ತ | ಪಾವತಿಯಾದ ಅರ್ಜಿಗಳ ಸಂಖ್ಯೆ | ಪಾವತಿಯಾದ ಮೊತ್ತ |
| ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | 0 | 0.00 | 311736 | 74.08 | 293770 | 256.55 | 141939 | 122.86 | 191879 | 130.83 |
| ಅಲೆಮಾರಿ/ಅರೆ ಅಲೆಮಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | 23199 | 8.44 | 15898 | 5.74 | 14120 | 12.19 | 16306 | 14.29 | 0 | 0 |
| ಶುಲ್ಕ ಮರುಪಾವತಿ | 887812 | 617.21 | 801732 | 562.11 | 492161 | 392.73 | 595180 | 469.46 | 153272 | 186.54 |
| ವಿದ್ಯಾಸಿರಿ | 35740 | 34.80 | 52308 | 51.32 | 39332 | 58.99 | 32984 | 49.48 | 41111 | 61.66 |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು
(ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ
ಸಂಖ್ಯೆ: 426 ಕ್ಕೆ ಅನುಬಂಧ-2

| ಆರ್ಥಿಕ ವರ್ಷ | ಸ್ವೀಕೃತವಾದ ಅರ್ಜಿಗಳು | ಅರ್ಹ ಅರ್ಜಿಗಳು | ಅನರ್ಹ ಅರ್ಜಿಗಳು |
|---|---|---|---|
| **2021-22** | 996557 | 987273 | 9284 |
| **2022-23** | 936807 | 875175 | 61632 |
| **2023-24** | 804148 | 740010 | 64138 |
| **2024-25** | 813286 | 651767 | 161519 |
| **2025-26** | 592000 | 483591 | 108049 |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು